ಶ್ರೀ ಕೆ. ಎಚ್. ಪುಟ್ಟರಂಗನಾಥ್.—ಸ್ವಾಮಿ, ಗೋಮಾಳಗಳನ್ನು ಪಂಚಾಯಿತಿ ವಶಕ್ಕೆ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಅನೇಕ ಪಂಚಾಯಿತಿಗಳಲ್ಲಿ ಗೋಮಾಳಗಳನ್ನು ಹಂಚಿಕೊಂಡು ಗೋಮಾಳಗಳನ್ನು ಕ್ರಯಕ್ಕೆ ಮಾರಿರತಕ್ಕ ನಿದರ್ಶನಗಳು ನಮ್ಮ ತಾಲ್ಲೂಕಿನಲ್ಲಿ ಆಗಿವೆ. ಅಲಗೂರಿನಲ್ಲಿ ಇರತಕ್ಕ ಪಂಚಾಯಿತಿ ಸದಸ್ಯರು ಮತ್ತು ಚೇರ್‌ಮನ್ ಸೇರಿಕೊಂಡು 2-3 ಸಾವಿರರೂಪಾಯಿಗೆ ಮಾರಿರುತ್ತಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಯಾವರೀತಿ ಪ್ರಯತ್ನ ಮಾಡುತ್ತೀರಿ ? ಪ್ರತ್ಯೇಕವಾದ ಕಾನೂನು ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎನ್. ಹಚ್ಚಮಾಸ್ತಿಗೌಡ.—ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯಿಡು.—ತಮ್ಮ ಉತ್ತರದಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡವರ ವಿರುದ್ಧವಾಗಿ ಗ್ರಾಮಪಂಚಾಯಿತಿಯವರು ಸಿವಿಲ್ ನ್ಯಾಯಾಲಯದಲ್ಲಾಗಲಿ ಅಥವಾ ಕಂದಾಯ ನ್ಯಾಯಾಲಯಗಳಲ್ಲಾಗಲಿ ಕ್ರಮ ಜರುಗಿಸಬಹುದಾಗಿದೆ ಎಂದು ತಿಳಿಸಿದ್ದೀರಿ, ಆ ರೀತಿ ಕ್ರಮ ಜರುಗಿಸಬೇಕಾದರೆ ಚೇರ್‌ಮನ್ ಅಥವಾ ಸೆಕ್ರೆಟರಿಯವರು ಜರುಗಿಸಬಹುದೇ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಪಂಚಾಯಿತಿಯವರು ಕಾರ್ಯಕ್ರಮ ತೆಗೆದುಕೊಳ್ಳಬಹುದು ಎನ್ನುವುದು ಆಗಿದೆ. ಅವರಿಗೆ ಅಧಿಕಾರ ಇದೆಯೇ ಇಲ್ಲವೆ ಎಂದು ಕೆಲವು ಪಂಚಾಯಿತಿಯವರು ನಮಗೆ ಕೇಳುತ್ತಿದ್ದಾರೆ. ಅದಕ್ಕೂ ಕೂಡ ಪ್ರತ್ಯೇಕವಾಗಿ ಪೆಟ್ಟಿಸೂರು ಪಬ್ಲಿಕ್ ಪ್ರೊಸಿಸ್ ಎವಿಕ್ಷನ್ ಆಫ್ ಎನ್‌ಫೋರ್ಸ್‌ಡ ಆಕ್ಯೂಪೆನ್ಸಿ ಆಕ್ಟ್ ಇದೆ. ಅದರಲ್ಲಿ ಪಂಚಾಯಿತಿಗಳು, ತಾಲ್ಲೂಕುಬೋರ್ಡುಗಳು ಸೇರಿಕೊಳ್ಳುವ ರೀತಿ ಮಾಡಿ ಪೂರ್ಣ ಅಧಿಕಾರ ಇದೆ ಎಂದು ಗೊತ್ತು ಮಾಡುವುದು ಸರ್ಕಾರದ ಆಲೋಚನೆಯಲ್ಲಿ ಇದೆ.

Misappropriaion of Amount Sanctioned for construction of Farm House in Tarikere Taluk

873. Sri HANJI SHIVANNA (Tarikere).—

Will the Minister for Community Development and Social Welfare be pleased to state:—

(*a*) whether it has come to the notice of the Government that the President of Tarikere Taluk Board has misappropriated the sum obtained as free grant for construction of farm house ;

(*b*) whether the Government has received any representations in this behalf ; if so, whether an enquiry has been conducted by the concerned officers ;

(*c*) the steps taken by Government;

(*d*) whether Government is aware that timber was granted freely to the Harijans of Bankanakatte, Shivane Hobli in Tarikere Taluk for construction of houses;

(*e*) whether it is a fact that the said timber was misused by the Vice-President of that group panchayat ;

(*f*) the action taken by the Government in this behalf ?

Sri M. MALLIKARJUNASWAMY (Minister for Community Development and Social Welfare).—

(*a*) No grant has been sanctioned for the construction of farm house to the President of Tarikere Taluk Board.

(*b*) and (*c*) Do not arise in view of reply to clause (*a*) of the question.

(*d*) Yes.

(*e*) An enquiry in this behalf is being conducted by the Assistant Commissioner, Tarikere.

(*f*) Does not arise in veiw of reply to clause (*e*) of the question.

ಶ್ರೀ ಹಂಜಿ ಶಿವಣ್ಣ.—ಸ್ವಾಮಿ, ಉತ್ತರ ಕೊಟ್ಟಿರುವುದು ನೋಡಿದರೆ ತಮ್ಮ ಮನಸ್ಸಿಗೆ ಅರ್ಥವಾಗುತ್ತದೆ, ಇದರಲ್ಲಿ ತಾಲ್ಲೂಕುಬೋರ್ಡು ಅಧ್ಯಕ್ಷರಿಗೆ ಫ್ರೀ ಗ್ರಾಂಟ್ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಅದನ್ನು ತೆಗೆದುಕೊಂಡು ಮನೆ ಕಟ್ಟಿದೆ, ಅವರಮೇಲೆ ಸರ್ಕಾರದವರು ಎನ್‌ಕ್ವೈರಿ ಮಾಡಿ ರಿಪೋರ್ಟು ಬಂದಿರಬಹುದು. ಎಷ್ಟು ದಿವಸಗಳಲ್ಲಿ ಹಣ ತೆಗೆದುಕೊಂಡಿದ್ದಾರೆ ಹೇಳುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರಿಗೆ ಗ್ರಾಂಟನ್ನು ಕೊಟ್ಟಿಲ್ಲ, ಸಬ್‌ಸಿಡಿ ಮಾತ್ರ ಕೊಟ್ಟಿದ್ದೇವೆ. ಅದಕ್ಕೊಸ್ಕರ ಸಂಬಂಧಪಟ್ಟ ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರ್ ಮೇಲೆ ಎನ್‌ಕ್ವೈರಿ ನಡೆಯುತ್ತಾ ಇದೆ.

ಶ್ರೀ ಹಂಜಿ ಶಿವಣ್ಣ.—ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮೇಲೆ ಎನ್‌ಕ್ವೈರಿ ಮಾಡುತ್ತಾ ಇದ್ದೀರಿ. ಹಣ ತೆಗೆದುಕೊಂಡ ಅಧ್ಯಕ್ಷರ ಮೇಲೆ ಕ್ರಮ ಏನೂ ತೆಗೆದುಕೊಂಡಿಲ್ಲ ಎಂದು ಕಾಣುತ್ತದೆ. ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಹಣ ತೆಗೆದುಕೊಂಡಿಲ್ಲ. ಸಬ್ಸಿಡಿ 200 ರೂಪಾಯಿ ಕೊಟ್ಟಿರುವುದು ಅದನ್ನು ಪತಕ್ಕೆ ಕೊಟ್ಟಿರಿ ಎಂದು ಎನ್‌ಕ್ವೈರಿ ಮಾಡುತ್ತಾ ಇದ್ದೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಸಬ್ಸಿಡಿ ತೆಗೆದುಕೊಂಡು ಮಿಸ್‌ಯೂಸ್ ಮಾಡಿದ್ದಾರೆ ಎಂದು ಹೇಳಿದ್ದೀರಿ. ಆ ಪ್ರೆಸಿಡೆಂಟ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಗೌರ್ನ್‌ಮೆಂಟ್ ಎನ್‌ಕ್ವೈರಿ ಫೈನಲೈಸ್ ಮಾಡಿಲ್ಲ, ಯಾವಾಗ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದನ್ನು ಸಾಧ್ಯವಾದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಇದು ಎರಡೂವರೆ ವರ್ಷಗಳಿಂದ ಪೆಂಡಿಂಗ್ ಇದೆ, ಮಾರಾಟ ಮಾಡಿಬಿಟ್ಟಿದ್ದಾರೆ!

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎನ್‌ಕ್ವೈರಿ ಸಾಧ್ಯವಾದಷ್ಟು ಬೇಗ ಕಂಪ್ಲೀಟ್ ಮಾಡುತ್ತೇವೆ.

12-30 P.M.

ಶ್ರೀ ಕೆ. ಪ್ರಭಾಕರ್.—ಬಡವರಿಗೆ ಮರಗಳನ್ನು ಕೊಟ್ಟರೆ ಮಿಸ್‌ಯೂಸ್ ಮಾಡಿ ಕೊಳ್ಳುತ್ತಾರೆ ಎನ್ನುವ ನೆಪದ ಮೇಲೆ ಬೋನಾಫೈಡಿ ವರ್ಕರ್ಸ್‌ಗೆ ತೊಂದರೆ ಕೊಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಯಾರು ಇದ್ದಾರೋ ಅವರು ದುಡ್ಡು ತಿಂದುಬಿಟ್ಟು ನಿಮಗೆ ಸಿಕ್ಕದೇ ಇರುವ ಹಾಗೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅರೀತಿ ಮಾಡಿರುವವರು ಎನ್‌ಕ್ವೈರಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಈ ಬಗ್ಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರ ಮೇಲೂ ಕೂಡ ಆಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಆ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಯಾವ ಪಕ್ಷದವರು ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಯಾವ ಪಕ್ಷದವರು ಅನ್ನುವುದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಹೇಳಬೇಕು.

ಶ್ರೀ ಹಂಜಿ ಶಿವಣ್ಣ.—ಹರಿಜನರಿಗೆ ಮನೆ ಕಟ್ಟಲು ಕೊಟ್ಟಂಥ ನಾಟಾವನ್ನು ಕೆಲವು ಖದೀಮರು ಸೇರಿ ದುರುಪಯೋಗ ಮಾಡಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಇದನ್ನು ಯಾರು ದುರುಪಯೋಗ ಮಾಡಿದ್ದಾರೆ ಅಂಥಾವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹರಿಜನರಿಗೆ ಕೊಟ್ಟಂಥ ನಾಟಾ ದುರುಪಯೋಗ ವಾಗಿದೆ ಎಂದು ಗೊತ್ತಾಗಿದೆ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್‌ರು ದುರುಪಯೋಗ ಮಾಡಿ ಕೊಂಡಿದ್ದಾರೆ ಎಂದು ಗೊತ್ತಾದ ಮೇಲೆ ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಮನೆ ಕಟ್ಟುವುದಕ್ಕೆ ನೀವು ಏನು ಸಬ್ಸಿಡಿಯನ್ನು ಮಂಜೂರು ಮಾಡುತ್ತಿರೋ ಅವನ್ನು ಮನೆ ಕಟ್ಟುವ ಮುನ್ನ ಕೊಡುತ್ತೀರೋ, ಮನೆ ಕಟ್ಟುವಾಗ ಕೊಡುತ್ತೀರೋ ಅಥವಾ ಮನೆ ಕಟ್ಟಿ ಮುಗಿಸಿದ ಮೇಲೆ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದಕ್ಕೆ ಸಂಬಂಧಪಟ್ಟ ಬಿ.ಡಿ.ಓ. ಇದ್ದಾರೆ, ಸೂಪರ್ ವೈಸರ್ ಇರುತ್ತಾರೆ, ಗ್ರಾಮಸೇವಕರು ಇರುತ್ತಾರೆ, ವೆಟರ್ನರಿ ಅಸಿಸ್ಟೆಂಟ್ ಸರ್ಜನ್ಸ್ ಇರುತ್ತಾರೆ, ಅವರು ಈ ಬಗ್ಗೆ ಒಂದು ವರದಿ ಕೊಟ್ಟಾದ ಮೇಲೆ ಸಬ್ಸಿಡಿ ಕೊಡುತ್ತೇವೆ. ಈ ರೀತಿ ಸಬ್ಸಿಡಿ ಕೊಟ್ಟಾದ ಮೇಲೆ ಅವರು ಮನೆ ಕಟ್ಟಿಲ್ಲ. ಅದು ದುರುಪಯೋಗವಾಗಿದೆ ಎಂದು ಗೊತ್ತಾದ ಮೇಲೆ ಆ ಬಗ್ಗೆ ಎನ್‌ಕ್ವೈರಿ ಮಾಡುತಿದ್ದೇವೆ.

Supply Fertilisers to Nanjangud Taluk

676 Sri N. S. GURUSIDDAPPA (Biligere).—

Will the Minister for Agriculture and Forests be pleased to state:—

(*a*) the numbers of wet lands in Nanjangud Taluk;

(*b*) the quantity of fertiliser supplied to the Taluk:

(*c*) the steps taken to avoid the scarcity of fertilisers in future ?

Sri K. H. PATIL (Minister for Agriculture and Forests).—

(*a*) 32,018 acres.

(*b*) 602 tonnes.

(*c*) Government have been in constant touch with Government of India and domestic manufacturers,in order to ensure supply of sufficient fertilisers to the State. The provisions of the Essential Commodities Act are also invoked against domestic manufacturers, whenever necessary, to see that they adhere to the supply plans. Government have appointed a Liaison Officer to arrange for expeditious despatches of Pool fertilisers to this State from the Madras Port.

Supply of fertilisers in the District, is entrusted to the District Leval Fertiliser allotment Committee of which the Deputy Commmissioner is the Chairman.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ವಾಮಿ, (ಅ)ಗೆ ಉತ್ತರವಾಗಿ 32,018 ಎಕರೆಗಳು ಇದೆ ಎಂದು ಹೇಳಿದ್ದೀರಿ. ಮತ್ತು ಅದೇ (ಆ) ಗೆ ಉತ್ತರವಾಗಿ 602 ಟನ್‌ಗಳಷ್ಟು ಗೊಬ್ಬರವನ್ನು ಒದಗಿಸಲಾಗಿದೆ ಎಂದು ಹೇಳುತ್ತೀರಿ. 602 ಟನ್ ಗೊಬ್ಬರ ಅಂದರೆ 60 ಸಾವಿರ ಕೆ. ಜಿ. ಗೊಬ್ಬರ ಆದ ಹಾಗಾಯಿತು. ಈಗ ನಮಗೆ 80 ಸಾವಿರ ಕೆ. ಜಿ. ಅಷ್ಟು ಗೊಬ್ಬರ ಬೇಕಾಗಿದೆ. ಈಗ ನೀವು ಕೊಟ್ಟಿರುವ ಲೆಕ್ಕಾಚಾರದ ಪ್ರಕಾರ ನಮಗೆ 20 ಸಾವಿರ ಕೆ.ಜಿ. ಅಷ್ಟು ಗೊಬ್ಬರ ಕೊರತೆ ಬರುತ್ತದೆ. ಆದುದರಿಂದ ಮುಂದಿನ ಬೆಳೆಗಾದರೂ ಈ ತೊಂದರೆಯನ್ನು ನೀವಾರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

† ಶ್ರೀ ಕೆ. ಎಚ್. ಪಾಟೀಲ್.—20 ಸಾವಿರ ಕೆ. ಜಿ. ಗೊಬ್ಬರ ನಿಮ್ಮ ತಾಲ್ಲೂಕಿಗೆ ಕಡಿಮೆ ಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಗೊಬ್ಬರ ಹಾಕುವುದಿಲ್ಲ, ನಾವು ನೈಟ್ರಜನ್ ಮತ್ತು ಯೂರಿಯಾ ಫರ್ಟಿಲೈಸರ್ಸ್‌ನ್ನು ಏನು ಸಪ್ಲೈ ಮಾಡುತ್ತೇವೆಯೋ ಅದನ್ನು ಪೂರ್ತಿಯಾಗಿ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈಗ 602 ಟನ್ ಅಷ್ಟು ಗೊಬ್ಬರವನ್ನು ಒದಗಿಸಲಾಗಿದೆ ಎನ್ನುವುದನ್ನು ತಿಳಿಸಿದ್ದೀರಿ. ಅದು ಯಾವ ದರದಲ್ಲಿ ಮಾರಾಟವಾಗುತ್ತ ಇದೆ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಕಂಟ್ರೋಲ್ ರೇಟ್ ಇದೆ, ಅದರಂತೆ ಮಾರುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈಗ ಈ ಯೂರಿಯಾ ಮತ್ತು ನೈಟ್ರಜನ್ ಫರ್ಟಿಲೈಸರ್ಸ್ ಯಾವ ಏಜೆನ್ಸಿ ಮೂಲಕ ಡಿಸ್ಟ್ರಿಬ್ಯೂಟ್ ಆಗುತ್ತದೆಯೋ ಅವರಿಗೆ ಎಷ್ಟೆಷ್ಟು ಗೊಬ್ಬರವನ್ನು ಸಪ್ಲೈ ಮಾಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ನೋಟೀಸ್.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈ ಗೊಬ್ಬರ ಯಾವ ಏಜೆನ್ಸಿ ಮೂಲಕ ಸಪ್ಲೈ ಆಗುತ್ತಿದೆ?

ಶ್ರೀ ಕೆ. ಎಚ್. ಪಾಟೀಲ್.—ಒಂದು ಮೈಸೂರು ಸ್ಟೇಟ್ ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಷನ್, ಎರಡನೇದು ಮೈಸೂರು ಸ್ಟೇಟ್ ಫೆಡರೇಷನ್ ಕಾರ್ಪೊರೇಷನ್ ಮುಖಾಂತರ ಸಪ್ಲೈ ಆಗುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಅಮೋನಿಯಾ ಮತ್ತು ಯೂರಿಯಾ ಫರ್ಟಿಲೈಸರ್ ಕಂಟ್ರೋಲ್ ರೇಟ್ ಏನು ಇದೆ ಅದಕ್ಕಿಂತ ಜಾಸ್ತಿಯಾಗಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಸಂದರ್ಭಗಳಲ್ಲಿ ಅದು ಸರ್ಕಾರದ ಗಮನಕ್ಕೆ ಬಂದಿದೆ. ಆ ರೀತಿ ಗಮನಕ್ಕೆ ಬಂದ ಮೇಲೆ ಯಾರು ಯಾರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾರೋ ಅವರ ಮೇಲೆ ಕಟ್ಟುನಿಟ್ಟಾಗಿ ಹಾಕಿದ್ದೇವೆ, ಆ ಕಟ್ಟುನಿಟ್ಟಿನ ಕೋರ್ಟ್‌ನಲ್ಲಿ ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರವನ್ನು ನರಬರಾಜು ಮಾಡುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುವ ಜಿಲ್ಲಾ ಮಟ್ಟದ ರಾಸಾಯನಿಕ ಗೊಬ್ಬರ ವಿತರಣಾ ಸಮಿತಿಗೆ ವಹಿಸಿಕೊಡಲಾಗಿದೆ ಎಂದು ಹೇಳಿದ್ದೀರಿ? ಆದರೆ ಇದನ್ನು ವಿತರಣೆ ಮಾಡುವಾಗ ಏರುಪೇರುಗಳು ಮಾಡುತ್ತಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ? ಆ ರೀತಿ ಬಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಏನಾದರೂ ಇದ್ದರೆ ಆ ಬಗ್ಗೆ ಡೆಪ್ಯೂಟಿ ಕಮೀಷನರಿಗೆ ಬರೆದು ಅದನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಈಗ ರಾಜ್ಯದಲ್ಲಿ ಗೊಬ್ಬರದ ಆವಶ್ಯಕತೆ ಎಷ್ಟು ಇದೆ, ಆ ಆವಶ್ಯಕತೆಗನುಗುಣವಾಗಿ ಸರ್ಕಾರದವರು ಒದಗಿಸುತ್ತಾ ಇಲ್ಲ. ಇದರಿಂದ ಬ್ಲಾಕ್‌ಮಾರ್ಕೆಟ್‌ನಲ್ಲಿರೇಟ್ ಜಾಸ್ತಿಯಾಗುತ್ತಾ ಇದೆ. ಆದುದರಿಂದ ಇದನ್ನು ತಡೆಗಟ್ಟುವುದಾಗಲಿ ಮತ್ತು ಆವಶ್ಯಕತೆಗನುಗುಣವಾಗಿ ಸಪ್ಲೈ ಮಾಡುವುದಕ್ಕೆ ಆಗಲಿ ಒಂದು ವ್ಯವಸ್ಥೆ ಮಾಡಬೇಕು. ಅಲ್ಲದೆ ಈಗ ಈ ಎರಡು ಏಜೆನ್ಸಿಯವರು ಏನು ಗೊಬ್ಬರ ಮಾರಾಟ ಮಾಡುತ್ತಿದ್ದಾರೋ ಅದನ್ನು ಅವರು ಬೇರೆ ಬೇರೆ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ರೈತರಿಗೆ ಇದರಿಂದಾಗುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.— ಒಂದನೇದು ಅವರು ಬೇರೆ ಬೇರೆ ದರದಲ್ಲಿ ಮಾರಾಟ ಮಾಡುವುದಿಲ್ಲ. ಇದಕ್ಕಾಗಿ ಏರಡು ಎಜೆನ್ಸಿ ಇದ್ದರೂ ಸಹ ಅವರು ನಿರ್ದಿಷ್ಟವಾದ ಬೆಲೆಯಲ್ಲಿ ಮಾರಾಟ ಮಾಡಬೇಕು ಎಂದು ತಿಳಿಸಲಾಗಿದೆ, ಅವರು ಕಡಿಮೆ ಬೆಲೆಯಲ್ಲಿ ಮಾರಿದರೆ ಅದರಲ್ಲಿ ನಮ್ಮ ಅಪರಾಧವೇನೂ ಇಲ್ಲ. ಆದರೆ ನಿರ್ದಿಷ್ಟವಾದ ಅವಧಿಗಿಂತ ಹೆಚ್ಚಿಗೆ ದರದಲ್ಲಿ ಮಾರಿದರೆ ಅವರಿಗೆ ಉಗ್ರವಾದ ಶಿಕ್ಷೆ ಕೊಡುತ್ತೇವೆ. ಎರಡನೆಯದಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಗೊಬ್ಬರದ ಕೊರತೆಯಿಂದ ಇದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಹೆಚ್ಚಿನ ಹಣ ಪಡೆಯುವುದಕ್ಕೆ ಆ ಸೊಸೈಟಿಯವರೇ ಅನ್ಯಾಯ ಮಾಡುವುದಕ್ಕೆ ಹೋದರೆ ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಸದಸ್ಯರುಗಳ ಸಹಕಾರ ಮತ್ತು ನಮ್ಮ ಸಹಕಾರ ಎರಡನ್ನೂ ಉಪಯೋಗಿಸಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ದೇಶದಲ್ಲಿ ಗೊಬ್ಬರದ ಕೊರತೆಯಿಂದಾಗಿ ಇದನ್ನು ವಿತರಣೆ ಮಾಡುವಾಗ ಕರ್ತವ್ಯ ಲೋಪಗಳನ್ನು ಮಾಡಿ ಬಡ ರೈತರಿಗೆ ಸಿಕ್ಕುವುದಿಲ್ಲ. ಈ ರೀತಿ ವರ್ತನೆ ಮಾಡುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಯಾರಾದರೂ ಕರ್ತವ್ಯ ಲೋಪ ಮಾಡಿದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ. - ಈ ವರ್ಷ 602 ಟನ್ ಗೊಬ್ಬರ ಏನು ಒದಗಿಸಿದ್ದೀರಿ ಅದು ಸಾಕಾಗುವುದಿಲ್ಲ, ಅದುದರಿಂದ ಮುಂದಿನ ವರ್ಷವಾದರೂ ಇದರ ಅಭಾವ ಇಲ್ಲದೇ ಇರುವ ಹಾಗೆ ಈ ಕೊರತೆಯನ್ನು ನೀಗಿರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಈ ವರ್ಷ ಜಾಸ್ತಿ ಬೇಕಾಗುತ್ತದೆ ಎಂದು ಗೊತ್ತಾಗಿದೆ. ಆದರೆ ಸಂಪೂರ್ಣವಾಗಿ ಈ ಕೊರತೆಯನ್ನು ನೀಗಿಸುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ.

Aid to Villagers Affected by Floods

678. **Sri N. S. GURUSIDDAPPA** (Biligere).—

Will the Minister for Revenue be pleased to state :—

(*a*) the number of paddy fields in Hedathale, Hemmaragala, Singaripura, damaged by the flood during the month of December;

(*b*) the aid given to the flood affected villgers by the Government?

Sri N. HUTCHAMSTHY GOWDA (Minister of Revenue).—

(*a*) (1) Hedathale village (including Singaripura which is a bamlet of Hedathale)—58.

(2) Hemmaragala village—No damage to paddy fields is reported.

(*b*) The question is under consideration.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ವಾಮಿ, ಡಿಶಂಬರ್ ತಿಂಗಳಿನಲ್ಲಿ ನಷ್ಟಕ್ಕೊಳಗಾದ ಹೆಡತಾರೆ, ಹೆಮ್ಮರಗಾಲ ಹಾಗೂ ಸಿಂಗಾರಿಪುರದಲ್ಲಿನ ಬತ್ತದ ಗದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 58 ಎಕರೆ ಎಂದು ಹೇಳಿದ್ದೀರಿ. ಅಲ್ಲಿ 5—6 ಕಡೆಗಳಲ್ಲಿ ಬತ್ತದ ಗದ್ದೆಗಳೆರ್ಲಾ ಹಾಳಾಗಿ ಹೋಗಿದೆ. ಈ ಬಗ್ಗೆ ಡೆಪ್ಯೂಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ಮತ್ತು ತಹಸೀಲ್ದಾರ್ ರವರ ಗಮನಕ್ಕೆ ತಂದಿದ್ದರೂ ಕೂಡ ಈವೊತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಆ ರೀತಿ ನಷ್ಟಕ್ಕೊಳಗಾದವರಿಗೆ ಏನಾದರೂ ಪರಿಹಾರ ಕೊಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರವಾಹದಲ್ಲಿ ನೊಂದವರಿಗೆ ಅದಕ್ಕನುಗುಣವಾಗಿ ಸಹಾಯ ಕೊಡಬೇಕು ಎಂದು ಗವರ್ನಮೆಂಟ್ ಆರ್ಡರ್ ಇದೆ. ಅದೇ ರೀತಿಯಲ್ಲಿ ಅಂತಹ ಒಂದು ಸಂದರ್ಭದಲ್ಲಿ ಅಸ್ತಿಯಲ್ಲಿ ನಷ್ಟವಾದವರಿಗೆ ಸಂರಕ್ಷಣೆ ಮಾಡಬೇಕು ಎಂದು ಇದೆ. ಮತ್ತು ಬೆಳೆಯಿಂದ ನಷ್ಟವಾಗಿರುವವರಿಗೂ ಕೂಡ ಪರಿಹಾರ ಕೊಡಬೇಕು ಎಂದು ತಿಳಿಸಿದ್ದೇವೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ವಾಮಿ, (ಅ) ಗೆ ಉತ್ತರವಾಗಿ ಬತ್ತದ ಗದ್ದೆಗೆ ನಷ್ಟವಾಗಿರುವ ವಿಚಾರವು ವರದಿಯಾಗಿರುವುದಿಲ್ಲ ಎಂದು ಹೇಳಿದ್ದೀರಿ ಮತ್ತು ಇನ್ನೊಂದು (ಆ) ಅನ್ನುವ ಪ್ರಶ್ನೆಗೆ ಈ ಪ್ರಶ್ನೆಯು ಪರಿಶೀಲನೆಯಲ್ಲಿದೆ ಎಂದೂ ಹೇಳಿದ್ದೀರಿ. ಆ ಪರಿಶೀಲನೆ ಎಲ್ಲಿಗೆ ಬಂದಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅಲ್ಲಿ ಬತ್ತದ ಗದ್ದೆಗಳಿಗೆ ಎಷ್ಟು ನಷ್ಟವಾಗಿವೆ ಎಂದು ಕೇಳಿದ್ದಕ್ಕೆ ನಿರ್ದಿಷ್ಟವಾಗಿ ಗೊತ್ತಿಲ್ಲ ಎಂದು ಹೇಳಿದೆ. ಆದರೆ ಮಾನ್ಯ ಸದಸ್ಯರು ಈ ಬಗ್ಗೆ 2—3 ಗ್ರಾಮಗಳ ಹೆಸರನ್ನು ಮಾತ್ರ ಕೇಳಿದ್ದಾರೆ. ಆದುದರಿಂದ ಈ ಬಗ್ಗೆ ಎಷ್ಟು ನಷ್ಟವಾಗಿದೆ ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ ಎಂದು ಹೇಳಿದ್ದು. ಅದರ ಜೊತೆಗೆ ಯಾವ ಊರಿನಲ್ಲಿ ಎಷ್ಟು ಗದ್ದೆಗೆ ನಷ್ಟವಾಗಿದೆ ಎನ್ನುವುದನ್ನು ಪರಿಶೀಲನೆ ಮಾಡಲಿ, ಮಾಡದೇ ಇರಲಿ ಅವರಿಗೆ ಸಹಾಯ ಕೊಡಬೇಕೆಂದು ಡೆಪ್ಯೂಟಿ ಕಮೀಷನರ್‌ರವರಿಗೆ ತಿಳಿಸಲಾಗಿದೆ.

Matka Gambling in Shorapura Town

787. Sri RAJA PID NAIK (Shorapur).—

Will the Chief Minister be pleased to state :—

(*a*) whether it is a fact that Matka Gambling is run in Shorapur Town, Gulbarga District ;

(*b*) if so, the number of Matka Companies that are operating in the town ;

(*c*) the action the Government have taken to control it ?

Sri D. DEVARAJ URS (Chief Minister) —

(*a*) Matka gambling exists to some extent in Shorpur Town.

(*b*) There are no known companies which are operating Matka gambling in Shorapur Town.

(*c*) Frequent raids by police are organised and prosecutions are aunched to eradicate Matka gambling.

Sri RAJA PID NAIK.—May I know how many prosecutions have been field so far and how many cases ended in conviction ?

† Sri D DEVARAJ URS —I am giving you the details in the entire Gulbarga District. In the year 1971—72 there were 10 cases and in the year 1972—73 there were 15 cases. All of them have ended in conviction.

Sri RAJA PID NAIK.—Is the Government aware that steps taken by the Police to avert this gambling are extremely inadequate and this has demoralising effect on the School—going children ? Will the Government take effective steps to arrest this evil tendency ?

Sri D. DEVARAJ URS.—Yes. We have taken steps to arrest this evil tendency. I request the Hon. Member to assist the Police by giving information about this gambling, so that the Police could take immediate action and see the concerned people participating in the gambling are booked. The Government's intention is certainly to arrest this evil tendency not only in this City but also elsewhere in the Gulbarga District. About 140 cases have been booked in this District, out of which 90 per cent of them had been booked in Gulbarga City itself and all of them are ended in conviction.

MADAM SPEAKER.—Now short notice question.

SHORT NOTICE QUESTION AND ANSWER

Fire Accident in Bharapur Tanda

8. Sri RAJA PID NAIK (Shorapur).—

Will the Minister for Revenue be pleased to state :—

(*a*) whether it has come to the notice of the Government that accidental fire broke out in Bailapur Tanda in Shorapur Taluk, Gulbarga District on 31st January 1973 at 10 P. M.;

(*b*) if so, the number of huts burnt and the extent of damages caused to the people reisdiag in those huts ;

(*c*) whether any request from the victims of fire accidents has been received for grant of relief ;

(*d*) if so, the action taken thereon and the extent of relief given ?

Sri N. HUTCHAMASTHY GOWDA (Minister for Revenue).—

(*a*) It has been reported that accidental fire broke out in Bharapur Tanda (not Bailapur Tanda) in Shorapur, on 1st Februray 1973 at about 10-00 P.M.

(*b*) 3 huts. The loss of foodgrains, clothes utensils and etc., is estimated to be Rs. 10,000.

(*c*) Yes.

(*d*) The Tahsildar after visiting the spot and after completings the enquiry has sent proposals to the Assistant Commissioner, Yadgir for grant of relief, as per Rules. Action is being taken to provide immediate relief to the victims of the fire accident.

Sri RAJA PID NAIK.—Will the Government clarify what is the exact amount of relief that is proposed to be given to the victims in fire accident ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರತಕ್ಕ ಗವರ್ನಮೆಂಟ್ ಆರ್ಡರ್ ಪ್ರಕಾರ 200 ರೂಪಾಯಿಗಿಂತ ಕಡಮೆ ನಷ್ಟವಾಗಿರತಕ್ಕವರಿಗೆ ಪೂರ ಪರಿಹಾರ ಕೊಡಬೇಕು, 200 ರೂಪಾಯಿ ಗಿಂತ ಜಾಸ್ತಿ ಸಾವಿರ ರೂಪಾಯಿ ಒಳಗೆ ನಷ್ಟವಾಗಿರುವವರಿಗೆ ಶೇಕಡ 50ರಷ್ಟು ಕೊಡಬೇಕು, ಸಾವಿರ ರೂಪಾಯಿಗೆ ಜಾಸ್ತಿ, ನಷ್ಟವಾಗಿರುವವರಿಗೆ 500 ರೂಪಾಯಿ ಕೊಡಬೇಕೆಂದಿದೆ. ಇದರ ಜೊತೆಗೆ ಮನೆ ಕಟ್ಟಿಕೊಳ್ಳುವವರಿಗೆ 300 ರೂಪಾಯಿ ಸಾಮಾನು ಕೊಡಬೇಕು ಎಂದಿದೆ.

Sri RAJA PID NAIK.—Is it not a fact that compared to the damages caused the valuation done by the authorities is too low and will the Government arrange to have the revaluation made so that a substantial amount may be given to the victims ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರತಕ್ಕ ಪರಿಸ್ಥಿತಿಯಲ್ಲಿ ಸರ್ಕಾರದಿಂದ ದೊರಕತಕ್ಕ ಪರಿಹಾರ ಗೊತ್ತು ಮಾಡಿದೆ. ಮಾನ್ಯ ಸದಸ್ಯರು ಅವಕ್ಕಿಂತ ಹೆಚ್ಚು ನಷ್ಟವಾಗಿದೆ, ಅದಕ್ಕನು ಗುಣವಾಗಿ ಸಹಾಯ ಕೊಡಬೇಕೆಂದು ಹೇಳಿದರೆ ಸರ್ಕಾರಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

Sri RAJA PID NAIK.—Will the Government give direction to the concerned Officer to grant relief to the victims immediately ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಹಳ ಬೇಗ ಕೊಡುವ ಏರ್ಪಾಡನ್ನು ಮಾಡಬಹುದು.

ಶ್ರೀ ಕೆ. ಯಂಕಟಪ್ಪ.—ಮನೆ ಸುಟ್ಟುಹೋದವರಿಗೆ ಪರಿಹಾರ ಕೊಡುವ ವಿಚಾರ ಹೇಳಿದರು. ಇಲ್ಲಿಯವರೆಗೆ ಮನೆ ಸಾಮಾನುಗಳನ್ನು ಯಾರಿಗೆ ಕೊಟ್ಟಿದ್ದಾರೆ ಅಥವಾ ಕೊಡಲ್ಪಟ್ಟಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕೇಸುಗಳಿಗೆ ಸಂಬಂಧಪಟ್ಟ ಹಾಗೆ ಇನ್ನೂ ಮನೆ ಸಾಮಾನುಗಳನ್ನು ಯಾರಿಗೂ ಕೊಟ್ಟಿಲ್ಲ.

ಶ್ರೀ ಎಂ. ಎಂ. ಸಜ್ಜನ್.—ಆಹಾರ ಧಾನ್ಯ, ಬಟ್ಟೆ, ಪಾತ್ರೆ ಇವುಗಳಿಗೆ ಉಂಟಾದ ನಷ್ಟ ಪೆಷ್ಟು ಎಂಬುದನ್ನು ಹೇಳಿದ್ದಾರೆ. ಎಷ್ಟು ಟೀಲ ಆಹಾರಧಾನ್ಯ ನಷ್ಟವಾಯಿತು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಷ್ಟು ಪೂರ್ಣ ವಿವರವಿಲ್ಲ.

MADAM SPEAKER.—Question Hour is over.

QUESTIONS FOR ANSWERS ON THE DAY

(but not taken up)

Prices of Agricultural Implements and Manure, etc.

395. **Sri H. G. CHANNAPPA** (Magadi).—

Will the Minister for Agriculture and Forests be pleased to state :—

(*a*) whether it has come to the notice of the Government that the price of articles required for agriculture, *i.e.*, agricultural implements, manure, etc., has been doubled in the State ;

(SRI H. G. CHANNAPPA)

(*b*) if so, whether the Government intend to inerease the price of levy paddy which is Rs. 52 per quintal in view of the rise in prices of above articles ;

(*c*) if not, whether the Government would take steps to control the prices of Agricultural implements and other articles used in Agriculture ?

SRI K. H. PATIL (Minister for Agriculture and Forests).—

(*a*) Yes. There has been some rise in the prices of these articles recently.

(*b*) The levy applies only to a part of the grains produced by the ryots. The ryots can sell the remaining part of the produce in the open market and thereby make up the loss due to low price in levy paddy.

(*c*) There is no provision for either the manufacturer or the sellers for increasing the prices of agricultural implements and the medicines required for plant protection as they like. They are required to obtain the recognition from the Stores Purchase Department of the State Government compulsorily before selling any such of the implements or articles. The S.T.D. decides the fixed price in respect of each articles. The prices of the tractors are decided by the Government of India. So, Government have enough control over the prices of these articles. The Government would take suitable steps against those persons if anybody sells these articles at higher price than the fixed one.

The Government have complete control over the prices of the fertilizers also. In this connection, the Central Government has issued an order called the Fertilizer (Control) Order, 1957 on 15 5-1957. Accordingly, the Central Government desides the ceiling price for certain nitrogenous fertilizer. The manufacturer or the seller of manure should sell the same at the rates so fixed. The manure cannot be sold at higher rate. If anybody sells at higher rates the Government would take suitable steps against them. As regards the agricultural implements its demands are mostly met by the Government Implements Factory, Hassan and Mandya Taluk Agriculture Produce Co-operative Marketing Society, Mandya. Thus these implements are mostly sold through Agro Centres and Co-operative Societies. Therefore the prices of these are generally within the reasonable limits.

Compensation for Land Acquired for Straightening Sankey Road

581. SRI K. PUTTASWAMY (Chamundeswari).—

Will the Minister for Revenue be pleased te state :—

(*a*) the extent of land acquired at the Bangalore Palace for the purpose of straightening the Sankey Road ;

(*b*) the amount of compensation paid for the lands acquired ;

(*c*) to whom the compensation was paid ;

(*d*) the basis adopted for determining the compensation ;

(*e*) whether title to the property to be acquired was examined before payment of the compensation ?

Sri N. HUTCHAMASTHY GOWDA (Minister for Revenue).—

(*a*) 10,168 Sq. yards of land was acquired under the Land Acquisition Act.

(*b*) Rs. 10,97,347-52 P.

(*c*) The compensation was paid to the Former Maharaja of Mysore.

(*d*) As per the prevailing market value.

(*e*) Yes.

Memoranda Submitted to Sixth Finance Commission

449. Sri G. PUTTASWAMY (Mudigere).—

Will the Minister for Finance be pleased to state :—

(*a*) the details of the memoranda submitted to the Sixth Finance Commission by the Government of Karnataka ;

(*b*) whether the additional D.A., Pay and Allowances required to their servants is taken into consideration in submitting the memoranda;

(*c*) whether separate amount has been asked for, for the works required to be taken up for the development of the areas in the State which are subjected to famine conditions ;

(*d*) whether any separate amount has been asked for, for the development of Malnad which is a backward area ;

(*e*) the amount asked for, for the welfare of S.C. and S.Ts. ;

(*f*) the reaction of the Commission in this behalf ?

Sri M. Y. GHORPADE (Minister for Finance).—

(*a*) The Honourable Member have already been supplied with the printed copies of the Memoranda containing the details.

(*b*) The amount required for the parity of D.A. with the Central Government Employees is included in the estimate.

(*c*) The additional amount for famine relief has been included in the estimate.